ಇಂದು ದಿ: **21.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀ ಸವಾಲು **1** ನೇ ಪ್ರತಿವಾದಿಯ ಪರಃ ಶ್ರೀಮತಿ ಹೆಚ್ ಹೆಸ್ ಆರ್ ವಕೀಲರು ಏನು ಇಲ್ಲವೆಂದು ಹೇಳಿರುತ್ತಾರೆ**.**

ಪಾಟೀ ಸವಾಲು **2, 3, 5** ಮತ್ತು **6** ನೇ ಪ್ರತಿವಾದಿಗಳ ಪರಃ ಶ್ರೀ ಸಿ ಬಿ**.,** ವಕೀಲರಿಂದ

ದಾವೆಯನ್ನು ಸಲ್ಲಿಸಲು ನಾನೊಬ್ಬಳೇ ಬಂದಿದ್ದೆ ನಮ್ಮ ತಂದೆ ಮೃತಪಟ್ಟು 6 ವರ್ಷ ಆಗಿರುತ್ತದೆ. ನಮ್ಮ ತಂದೆಯ ತಂದೆಯ ಹೆಸರು ಗಿರಿತಿಮ್ಮಜ್ಜರ ರಂಗಪ್ಪ ಎಂದರೆ ಸಾಕ್ಷಿ ಚಿಕ್ಕಣ್ಣ ಎಂದು ಹೇಳುತ್ತಾರೆ. ನಮ್ಮ ತಂದೆಯವರು 3 ಜನ ಅಣ್ಣತಮ್ಮಂದಿರು. ಮೊದಲನೆಯವರು ನಮ್ಮ ತಂದೆ ರಂಗಪ್ಪ, ಎರಡನೆಯವರು ದಾಸಪ್ಪ ಮತ್ತು ಕೊನೆಯವರು ಚಿಕ್ಕಣ್ಣ. ಮೇಣಪ್ಪ ನಮ್ಮ ತಾತನ ತಮ್ಮ. ಸದರಿ ಮೇಣಪ್ಪನಿಗೆ ರಾಜಪ್ಪ ಎಂಬ ಮಗ ಇರುತ್ತಾನೆ ಎನ್ನುವುದು ನಿಜ. ರಂಗಪ್ಪ, ದಾಸಪ್ಪ ಮತ್ತು ಚಿಕ್ಕಪ್ಪ ಇವರಿಗೂ ಮಕ್ಕಳು ಇರುತ್ತಾರೆ. ದಾವಾ ಆಸ್ತಿಗಳು ನೀರುಗಂಡ ಕೋಡಿಹಳ್ಳಿ ಗ್ರಾಮಕ್ಕೆ ಸೇರಿದ್ದವು. ನಾನು ಮದುವೆ ಮೊದಲು ದಾವಾ ಆಸ್ತಿಗಳಿಗೆ ಹೋಗಿ ವ್ಯವಸಾಯದ ಕೆಲಸವನ್ನು ಮಾಡಿರುತ್ತೇನೆ. ಎಲ್ಲಾ ದಾವಾ ಅಸ್ತಿಗಳನ್ನು ಖುದ್ದಾಗಿ ನಾನು ನೋಡಿರುತ್ತೇನೆ. ಸದರಿ ಜಮೀನುಗಳ ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚೆಕ್ಕುಬಂದಿ ಹೇಳಲು ಅಗುವುದಿಲ್ಲ.

ನಮ್ಮ ತಂದೆ ರಂಗಪ್ಪ ಇವರ ಜೀವಿತ ಕಾಲದಲ್ಲಿ ಪಿತ್ರಾರ್ಜಿತ ಆಸ್ತಿಗಳನ್ನು ಅವರ ಅಣ್ಣತಮ್ಮಂದಿರ ಜೊತೆಗೆ ಒಟ್ಟಾಗಿ ಅನುಭವಿಸುತ್ತಿದ್ದರು ಎಂದರೆ ಸಾಕ್ಷಿ ಭಾಗ ಮಾಡಿಕೊಂಡು ಅನುಭವಿಸುತ್ತಿದ್ದರು ಎಂದು ಹೇಳುತ್ತಾರೆ. ಅ ರೀತಿ ಭಾಗ ಮಾಡಿಕೊಂಡಿರುವ ಕುರಿತು ವಿಭಾಗ ಪತ್ರ ಇರುವುದಿಲ್ಲ. ಅವರ ಅನುಭವದಂತೆ ಖಾತೆ ವರ್ಗಾವಣೆ ಅಗಿಲ್ಲ. ಇಂದಿಗೂ ಸಹ ದಾವಾ ಆಸ್ತಿಗಳ ಖಾತೆ ನಮ್ಮ ತಂದೆ ಹಾಗೂ ಅವನ ಸಹೋದರರ ಹೆಸರಿಗೆ ಜಂಟಿಯಾಗಿ ಇರುತ್ತವೆ ಎನ್ನುವುದು ನಿಜ. ನಾನು ಹಾಜರುಪಡಿಸಿರುವ ಪಹಣಿಗಳನ್ನು ಪರಿಶೀಲನೆ ಮಾಡಿರುತ್ತೇನೆ. ಸದರಿ ಪಹಣಿಗಳು ನಮ್ಮ ತಂದೆ ಮತ್ತು ಅವರ ಸಹೋದರರ ಹೆಸರಿಗೆ ಜಂಟಿಯಾಗಿ ಇರುತ್ತವೆ ಎನ್ನುವುದು ನಿಜ. ನಮ್ಮ ತಂದೆ ಹಾಗೂ ಅವನ ಸಹೋದರರು ಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಅನುಭವಿಸಿದ್ದರ ಆಧಾರದ ಮೇಲೆ ನಮ್ಮತಂದೆಯ ಭಾಗದ ಆಸ್ತಿಗಳು ಎಂದು ಹೇಳುತ್ತಿದ್ದೇನೆ. ನಮ್ಮ ತಂದೆಯ ಭಾಗದ ಆಸ್ತಿಗಳ ಚೆಕ್ಕುಬಂದಿ ಹೇಳಲು ಆಗುವುದಿಲ್ಲ. 1 ನೇ ಪ್ರತಿವಾದಿ ನಮ್ಮ ತಾಯಿ. 1 ನೇ ಪ್ರತಿವಾದಿಯನ್ನು ನಮ್ಮ ಮನೆಯಲ್ಲಿ ಇಟ್ಟು ಕೊಂಡು ನಾನೇ ನೋಡಿಕೊಳ್ಳುತ್ತಿದ್ದೇನೆ ಎನ್ನುವುದು ನಿಜ. ನನಗೆ 3 ಜನ ಸಹೋದರರು ಎನ್ನುವುದು ನಿಜ. ನಮ್ಮ 2 ನೇ ಅಣ್ಣ ಮಹಾಂತೇಶಪ್ಪ ದಾವೆಯನ್ನು ಸಲ್ಲಿಸಿದ ನಂತರ ಮೃತಪಟ್ಟಿರುತ್ತಾನೆಎನ್ನುವುದು ನಿಜ. ಸದರಿ ಮಹಾಂತೇಶಪ್ಪನ ಮಕ್ಕಳು ಇರುತ್ತಾರೆ ಎನ್ನುವುದು ನಿಜ. ಸದರಿ ಮಹಾಂತೇಶಪ್ಪ ಮೃತಪಟ್ಟ ನಂತರ ಅವರ ಹೆಂಡತಿ ಮಕ್ಕಳನ್ನು ಈ ದಾವೆಯಲ್ಲಿ ಸೇರ್ಪಡೆ ಮಾಡಿಲ್ಲ ಎನ್ನುವುದು ನಿಜ. ನಮ್ಮ ಅಣ್ಣನ ಹೆಂಡತಿ ಮಕ್ಕಳ ವಿಳಾಸ ಮತ್ತು ಅವರು ಏನು ಮಾಡುತ್ತಾರೆ ಎನ್ನುವ ಮಾಹಿತಿ ನನಗೆ ಇರುತ್ತದೆ ಎನ್ನುವುದು ನಿಜ. ನಮ್ಮ ತಾಯಿ 30 ವರ್ಷದಿಂದ ನಮ್ಮ ಮನೆಯಲ್ಲಿ ಇರುತ್ತಾರೆ. ನಮ್ಮ ತಾಯಿಯ ತಂದೆ ಕಡೆಯಿಂದ ಬಂದ

3 ಜಮೀನುಗಳ ಖಾತೆ ನಮ್ಮ ತಾಯಿಯ ಹೆಸರಿಗೆ ಇರುತ್ತವೆ ಎನ್ನುವುದು ನಿಜ. ಸದರಿ 3 ಜಮೀನುಗಳ ಸರ್ವೆ ನಂಬರ್, ವಿಸ್ತೀರ್ಣ ಹೇಳಲು ಆಗುವುದಿಲ್ಲ. ಸದರಿ 3 ಜಮೀನುಗಳ ಮೇಲೆ ನಮ್ಮತಾಯಿಯ ಚಿಕ್ಕಪ್ಪ, ದೊಡ್ಡಪ್ಪ ಇವರ ವಿರುದ್ಧ ನಮ್ಮತಾಯಿ ದಾವೆಯನ್ನು ಸಲ್ಲಿಸಿದ್ದಳು ಎನ್ನುವುದು ನಿಜ. ಸದರಿ ದಾವೆ ಚಾಲ್ತಿಯಲ್ಲಿದ್ದಾಗ ನಮ್ಮ ತಾಯಿಯಿಂದ ದಾನ ಪತ್ರ ಬರೆಸಿಕೊಂಡಿದ್ದೆ ಎಂದರೆ ಸಾಕ್ಷಿ ದಾವೆ ಸಲ್ಲಿಸುವ ಪೂರ್ವದಲ್ಲಿ ಬರೆದುಕೊಟ್ಟಿದ್ದಳು ಎಂದು ಹೇಳುತ್ತಾರೆ. ನಮ್ಮ ತಾಯಿಯ ಆಸ್ತಿಗಳನ್ನು ನಾನು ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತೇನೆ ಎಂದು 2 ರಿಂದ 4 ನೇಪ್ರತಿವಾದಿಗಳು ಮೇಲ್ಮನವಿಯನ್ನು ಸಲ್ಲಿಸಿದ್ದರು ಎನ್ನುವುದು ನಿಜ. ಸದರಿ ಮೇಲ್ಮನವಿ 2 ರಿಂದ 4 ನೇ ಪ್ರತಿವಾದಿಗಳ ಪರ ಆಗಿರುತ್ತದೆ ಎನ್ನುವುದು ನಿಜ. ನಮ್ಮ ತಾಯಿಗೆ ವ್ಯವಹಾರಿಕವಾಗಿ ಹಲವಾರು ವರ್ಷಗಳಿಂದ ಸೀಮಿತವಾದ ಬುದ್ದಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯನ್ನು ಬಿಟ್ಟು ನಮ್ಮ ಅಣ್ಣತಮ್ಮಂದಿರ ಮನೆಯಲ್ಲಿ 4-5 ಬಾರಿ ಇದ್ದು, ನಮ್ಮ ಮನೆಯಲ್ಲಿಈಗ ಇರುತ್ತಾಳೆ ಎನ್ನುವುದು ನಿಜ. ಈ ದಾವೆಯನ್ನು ಸಲ್ಲಿಸುವ ಸಂಪೂರ್ಣ ಮಾಹಿತಿ ನಮ್ಮ ತಾಯಿಗೆ ಗೊತ್ತಿತ್ತು.

ನಮ್ಮ ತಂದೆ ಮತ್ತು ತಾಯಿಯ ಮಧ್ಯೆ ಸುಮಾರು 40 ವರ್ಷಗಳಿಂದ ಹೊಂದಾಣಿಕೆ ಇರಲಿಲ್ಲ. ಸದರಿ ಹೊಂದಾಣಿಕೆ ಇಲ್ಲದೆ ಇರುವ ದುರುಪಯೋಗ ಪಡೆದು ನಾನು ಮತ್ತು ನನ್ನ ಗಂಡ ಸೇರಿ ನನ್ನ ತಾಯಿ ಮತ್ತು ಅವಳ ಗಂಡು ಮಕ್ಕಳ ಮಧ್ಯ ವಿರಸ ತಂದು ಇಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ತಂದೆ ತಾಯಿಗೆ ನಾನು ಒಬ್ಬಳೇ ಹೆಣ್ಣು ಮಗಳು ಎನ್ನುವುದು ನಿಜ. ನಮ್ಮ ತಂದೆ ತಾಯಿಗಳಿಗೆ ನನ್ನಮೇಲೆ ಮಮಕಾರ ಹೆಚ್ಚು ಇರುತ್ತದೆ ಎಂದರೆ ಸರಿಯಲ್ಲ. ಆ ಮಮಕಾರದಿಂದ ಸರ್ಕಾರಿ ನೌಕರನಿಗೆ ನನ್ನನ್ನು ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆಯ ಸಮಯದಲ್ಲಿ ನನಗೆ ಕೊಡಬೇಕಾದ ಹಣ, ಒಡವೆ ಮತ್ತು ವರದಕ್ಷಿಣೆ ಕೊಟ್ಟು ಮದುವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ನಮ್ಮ ಚಿಕ್ಕಪ್ಪರಾದ ದಾಸಪ್ಪ ಮತ್ತು ಚಿಕ್ಕಪ್ಪ ಇವರಿಗೂ ಭಾಗ ಇದೆ ಎಂದರೆ ಸಾಕ್ಷಿ 18 ಎಕರೆಯಲ್ಲಿ ಇರುತ್ತದೆ ಎಂದು ಹೇಳುತ್ತಾರೆ. ಸದರಿ 18 ಎಕರೆ ಜಮೀನಿನ ವಿವರವನ್ನು ಹೇಳಲು ಆಗುವುದಿಲ್ಲ. ಆ ರೀತಿ ಜಂಟಿ ಖಾತೆ ಇರುವುದರಿಂದ ನನಗೆ ಭಾಗ ಕೊಡಲು ನಮ್ಮ ಕುಟುಂಬದ ಚಿಕ್ಕಪ್ಪಂದಿರು ಮತ್ತು ನನ್ನ ಸಹೋದದರರು ಅಶಕ್ತರಾಗಿದ್ದು, ನನಗೆ ಈಗಾಗಲೇ ಮದುವೆ ಸಮಯದಲ್ಲಿ ಕೊಟ್ಟಿದ್ದರಿಂದ ಯಾವುದೇ ಭಾಗ ಬರುವುದಿಲ್ಲ ಎಂದರೆ ಸರಿಯಲ್ಲ. ಪಾಲು ವಿಭಾಗ ಪತ್ರದಲ್ಲಿ ಇರುವಂತೆ ಅಸ್ತಿಗಳು ಅಸ್ತಿತ್ವದಲ್ಲಿ ಇಲ್ಲದ ಕಾರಣ, ಖಾತೆಗಳು ವರ್ಗಾವಣೆ ಆಗಿಲ್ಲ ಎಂದರೆ ಸರಿಯಲ್ಲ. ದಾವಾ 10 ಮತ್ತು 12 ನೇ ಆಸ್ತಿಯನ್ನು ಯಾರಿಂದ ಯಾವಾಗ ಖರೀದಿ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ದಾವಾ 13 ನೇ ಆಸ್ತಿಯನ್ನು 2 ನೇ ಪ್ರತಿವಾದಿ ಯಾವಾ ಆಧಾರದ ಮೇಲೆ ಖಾತೆ ಮಾಡಿಕೊಂಡಿರುತ್ತಾನೆ ಎಂದು ಹೇಳಲು ಆಗುವುದಿಲ್ಲ. ದಾವೆಯನ್ನು ಸಲ್ಲಿಸುವ ಮೊದಲು 5 ಮತ್ತು 6 ನೇಪ್ರತಿವಾದಿಗಳಿಗೆ ನಾನು ಕೇಳಿಲ್ಲ. ದಾವಾ ಸಲ್ಲಿಸುವಾಗ ಪಹಣಿಗಳನ್ನು ಪರಿಶೀಲನೆ ಮಾಡಿ ನಮ್ಮ ವಕೀಲರಿಗೆ ಹೇಳಿರುತ್ತೇನೆ. ಸದರಿ ಪಹಣಿಯಲ್ಲಿ 5 ಮತ್ತು 6 ನೇ ಪ್ರತಿವಾದಿಗಳ

ಹೆಸರಿಗೆ ಜಂಟಿ ಖಾತೆ ಇರುವುದು ಗೊತ್ತಿರುತ್ತದೆ. ನಾನು ಮದುವೆಯಾದಾಗಿನಿಂದ ಇವರೆಗೂ ಒಂದಿಲ್ಲ ಒಂದು ಕಾರಣಗಳಿಂದಾಗಿ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಿನಾಕಾರಣ, ಅವರ ಕುಟುಂಬ ಹಾಗೂ ಅವರ ಆಸ್ತಿಗಳಲ್ಲಿ ಪ್ರವೇಶ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರ ದುರ್ಬಳಕೆ ಮಾಡಿಕೊಂಡು ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಮತ್ತು ನಮ್ಮ ತಾಯಿಗೂ ದಾವಾ ಆಸ್ತಿಗಳಲ್ಲಿ ಹಿಸ್ಸೆ ಪಡೆಯು ಹಕ್ಕು, ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

(ವೈ.ಕೆ ಬೇನಾಳ್ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.